ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

<u>ಸಿ.ಸಿ.1641/2025</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಲ್ಲೇಗೌಡ ಬಿ. | ಪಿ.ಡಬ್ಲ್ಯೂ.6 |
| ತಂದೆಯ ಹೆಸರು | : | ಬಸವರಾಜಪ್ಪ | ಸಿ.ಡಬ್ಲ್ಯೂ.4 |
| ವಯಸ್ಸು | : | 50 ವರ್ಷ | |
| ವೃತ್ತಿ | : | ಹೆಚ್.ಸಿ.194, ಸಿ.ಇ.ಎನ್ ಪೊಲೀಸ್ ಠಾಣೆ | |
| ವಾಸ | : | ಚಿಕ್ಕಮಗಳೂರು | |

<u>ದಿನಾಂಕಃ 06-07-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-</u>

ನಾನು ದಿಃ15.07.2021 ರಿಂದ ಇಲ್ಲಿಯವರೆಗೆ ಚಿಕ್ಕಮಗಳೂರಿನ ಸಿ.ಇ.ಎನ್ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ21.06.2025 ರಂದು ಮಧ್ಯಾಹ್ನಃ 12.20 ಗಂಟೆಗೆ ಚಾಸಾ-1 ರವರು ದಾಳಿಯನ್ನು ನಡೆಸಲು ಸಹಕರಿಸುವಂತೆ ಕೋರಿಕೊಂಡ ಪ್ರಕಾರ ನಾನು ಹಾಗೂ ಇತರ ಸಿಬ್ಬಂದಿಗಳು ಠಾಣೆಯಿಂದ ಹೊರಟು ಪಂಚರ ಜೊತೆಗೆ ಆಲ್ದೂರು ಪೊಲೀಸ್ ಠಾಣಾ ಸರಹದ್ದಿನ ಯಲಗುಡಿಗೆ ಗ್ರಾಮದ ಸ್ಮಶಾನದ ಬಳಿ ಮಧ್ಯಾಹ್ನ ಸುಮಾರು 12.50 ಗಂಟೆಗೆ ತಲುಪಿದ್ದು, ನಂತರ ಮರೆಯಲ್ಲಿ ನಿಂತು ನೋಡಲಾಗಿ ಸ್ಮಶಾನದ ಬಳಿ ಒಬ್ಬ ಆಸಾಮಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಮಧ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ಕಂಡುಬಂತು. ನಂತರ ನಾವು ಸಿಬ್ಬಂದಿಗಳು ಚಾಸಾ-1 ಹಾಗೂ ಪಂಚರ

ಜೊತೆಗೆ ದಾಳಿ ನಡೆಸಿದ್ದು ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ ಆತನು ತನ್ನ ಹೆಸರು ಕಾರ್ತಿಕ್ ಎಂದು ತಿಳಿಸಿರುತ್ತಾನೆ. ಆತನ ವಶದಲ್ಲಿ ಇದ್ದ ಚೀಲವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ ಮದ್ಯ ತುಂಬಿದ 90 ಎಂ.ಎಲ್.ನ ಓರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 96 ಪೌಚುಗಳು ಇರುವುದು ಕಂಡುಬಂತು. ನಂತರ ಚಾಸಾ-1 ರವರು ಸದರಿ ಪೌಚುಗಳನ್ನು ಅದೇ ಚೀಲದಲ್ಲಿ ತುಂಬಿಸಿ ಸೀಲು ಮಾಡಿರುತ್ತಾರೆ. ನಂತರ ಸದರಿ ಚೀಲದ ಮೇಲೆ ಪಂಚರು ಹಾಗೂ ತನಿಖಾಧಿಕಾರಿಯವರ ಚೀಟಿಯನ್ನು ಅಂಟಿಸಿರುತ್ತೇನೆ.

ನಂತರ ಚಾಸಾ-1 ರವರು ಆರೋಪಿಗೆ ನೋಟೀಸ್ ಅನ್ನು ಜಾರಿ ಮಾಡಿರುತ್ತಾರೆ. ನಂತರ ಸದರಿ ಮಾಲಿನ ಜೊತೆಗೆ ಠಾಣೆಗೆ ವಾಪಾಸಾಗಿರುತ್ತೇವೆ. ಘಟನಾ ಸ್ಥಳದಲ್ಲಿ ಚಾಸಾ-1 ರವರ ಉಕ್ತ ಲೇಖನದಂತೆ ನಾನು ಮಹಜರ್ ಅನ್ನು ಬರೆದಿರುತ್ತೇನೆ. ಸದರಿ ಮಹಜರ್ ಅನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-4(ಇ) ಇರುತ್ತದೆ. ಸದರಿ ಮಹಜರ್ ಅನ್ನು ಮಧ್ಯಾಹ್ನ 01.00 ರಿಂದ 02.00 ಗಂಟೆಯವರೆಗೆ ತಯಾರಿಸಿರುತ್ತೇವೆ. ಸ್ಥಳದಲ್ಲಿ ಮಹಜರ್ ಸಮಯದಲ್ಲಿ ಫೋಟೋವನ್ನು ತೆಗೆಯಲಾಗಿರುತ್ತದೆ. ಸದರಿ ಫೋಟೋವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿರುತ್ತದೆ. ಈ ಬಗ್ಗೆ ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಮತ್ತು 2 ನ್ನು ನೋಡಿ ಗುರುತಿಸುತ್ತೇನೆ. ಆರೋಪಿಯನ್ನು ನೋಡಿ ಗುರುತಿಸುತ್ತೇನೆ. (ಈ ದಿನ ನ್ಯಾಯಾಲಯದ ಮುಂದೆ ಆರೋಪಿ ಗೈರು ಹಾಜರಿದ್ದು ಅವರನ್ನು ನೋಡಿ

ಗುರುತಿಸುವಲ್ಲಿ ತಮ್ಮ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ).

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>

ದಾಳಿಗೆ ಬರುವಂತೆ ನನಗೆ ಚಾಸಾ-1 ರವರು ಲಿಖಿತವಾಗಿ ನೋಟೀಸ್ ಅನ್ನು ನೀಡಿರುವುದಿಲ್ಲ. ಸದರಿ ದಿನ ಆರೋಪಿ ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದನು ಎಂದು ಹೇಳಲು ನನಗೆ ನೆನಪಿಲ್ಲ. ಆರೋಪಿಯ ಬಳಿಯಿಂದ ಸಾರ್ವಜನಿಕರು ಹಣವನ್ನು ನೀಡಿ ಮದ್ಯವನ್ನು ಖರೀದಿಸಿರುವುದನ್ನು ನೋಡಿರುತ್ತೇನೆ. ಆರೋಪಿಯ ಬಳಿಯಿಂದ ಸದರಿ ಮದ್ಯ ಮಾರಾಟ ಮಾಡಿದ ಹಣವನ್ನು ವಶಪಡಿಸಿಕೊಂಡಿರುವುದಿಲ್ಲ. ಘಟನಾ ಸ್ಥಳದಲ್ಲಿ ಪಂಚರ ಸಮಕ್ಷಮ ಯಾವುದೇ ಮಹಜರ್ ಅನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಯಾವುದೇ ಮದ್ಯದ ಪೌಚುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವುದೇ ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಕೂಡಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
(ಕುಮಾರಿ ಸುಜಾತ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

C.C.No.1641/2025
PW-6 CW-4

ಎಸ್ಆರ್ಃ